ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ವಿಶ್ವವಿದ್ಯಾಲಯ

**Karnataka State Rural Development and Panchayat Raj University**

ರೈತ ಭವನ, ಜನರಲ್‌ಕಾರ್ಯಪ್ಪ ವೃತ್ತ, ಗದಗ– 582 101

**RaithaBhavana, General Cariappa Circle, Gadag – 582 101**

**E-mail: ksrdpruadmissions@gmail.com Phone: 08372-230338, Fax: 08372-297343**

News about Webinar on "Motivation and Confidence Building" By Dr.Guraraj karjagi ,Published in various Kannada Daily NewsPapers Date:10.06.20201

## ಕೊರೊನಾ ಸೋಂಕನ್ನು ಸಕಾರಾತ್ಮಕವಾಗಿ ಸ್ವೀಕರಿಸಿ

ಗದಗ: ವಿಶ್ವಕಂಡ ಮಹಾಮಾರಿ ಕೊರೊನಾ ಸೋಂಕನ್ನು ವಿದ್ಯಾರ್ಥಿ ಸಮುದಾಯ ನಕಾರಾತ್ಮಕವಾಗಿ ನೋಡದೆ, ಸಕಾರಾತ್ಮಕವಾಗಿ ಸ್ವೀಕರಿಸಿ ಬಿಡುವಿನ ವೇಳೆ ವಿದ್ಯಾರ್ಥಿಗಳು ದೈಹಿಕ, ಮಾನಸಿಕ, ನೈತಿಕ ಮತ್ತು ಆಧ್ಯಾತ್ಮಿಕ ಬೆಳವಣಿಗೆ ಕಡೆಗೆ ಗಮನಹರಿಸುವ ಮೂಲಕ ಸದುಪಯೋಗಪಡಿಸಿಕೊಳ್ಳುವಂತೆ ಲೋಕಶಿಕ್ಷಣ ಟ್ರಸ್ಟನ ಧರ್ಮದರ್ಶಿ, ಶಿಕ್ಷಣ ತಜ್ಞ ಡಾ. ಗುರುರಾಜ ಕರ್ಜಗಿ ಪ್ರತಿಪಾದಿಸಿದರು.



ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ವಿಶ್ವವಿದ್ಯಾಲಯ ಏರ್ಪಡಿಸಿದ್ದ ವಿದ್ಯಾರ್ಥಿಗಳ ಯೋಗಕ್ಷೇಮ ಶೀರ್ಷಿಕೆಯಡಿ ಪ್ರೇರಣೆ ಮತ್ತು ಆತ್ಮಸ್ಥೈರ್ಯ ನಿರ್ಮಾಣದ ಸಂವಾದದಲ್ಲಿ ಮಾತನಾಡಿದ ಅವರು, ಕೊರೊನಾ ಸಂದರ್ಭವನ್ನು ನಕಾರಾತ್ಮಕವಾಗಿ ನೋಡದೆ, ಒಳ್ಳೆಯ ಅಂಶಗಳ ಕಡೆಗೆ ಗಮನಹರಿಸಬೇಕು. ಒಳ್ಳೆಯ ವಿಚಾರ ಮಾಡುವುದರಿಂದ ಹಾಗೂ ಒಳ್ಳೆಯ ಚಿಂತನೆ ಬೆಳೆಸಿಕೊಳ್ಳುವುದರಿಂದ ಮತ್ತು ಮನಸ್ಸಿನ ಒಳಗಿನ ಕೊಳೆ ಹೊರಹಾಕುವುದರಿಂದ ಆತ್ಮವಿಶ್ವಾಸ ಚಿಗುರೊಡೆಯುತ್ತದೆ ಎಂದರು.ವಿ.ವಿಯ ಕುಲಪತಿ ಪ್ರೊ. ವಿಷ್ಣುಕಾಂತ ಎಸ್. ಚಟಪಲ್ಲಿ ಮಾತನಾಡಿ, ಸಂವಾದದಿಂದ ವಿದ್ಯಾರ್ಥಿಗಳ ಮನೋಬಲ ವೃದ್ಧಿಯಾಗಲಿದೆ ಎಂದರು. 241 ವಿದ್ಯಾರ್ಥಿಗಳು ಹಾಗೂ ಅಧ್ಯಾಪಕರು ಆನಲೈನ್ ಮೂಲಕ ಸಂವಾದದಲ್ಲಿ ಭಾಗವಹಿಸಿದ್ದರು. ಕುಲಸಚಿವ ಡಾ. ಬಸವರಾಜ ಲಕ್ಕಣ್ಣವರ ಸ್ವಾಗತಿಸಿದರು, ಡಾ. ಅಭಯಕುಮಾರ ಗಸ್ತಿ ಕಾರ್ಯಕ್ರಮ ನಿರೂಪಿಸಿದರು. ಡಾ. ಗೀತಾ ಬಂಗಾರಿ ವಂದಿಸಿದರು.

ಪ್ರೇರಣೆ ಮತ್ತು ಆತ್ಮಸ್ಥೈರ್ಯ ನಿರ್ಮಾಣ

## ಡಾ. ಗುರುರಾಜ ಕರ್ಜಗಿಯವರ ಜೊತೆ ಸಂವಾದ

ಗದಗ, ಜೂ. 9. ಕೊರೋನಾ ಸಂದರ್ಭದಲ್ಲಿ ವಿದ್ಯಾರ್ಥಿಗಳು ಧೈರ್ಯಗುಂದದೆ ಆತ್ಮವಿಶ್ವಾಸಗಳಿಸಲು ವಿದ್ಯಾರ್ಥಿಗಳ ಯೋಗಕ್ಷೇಮ ಶೀರ್ಷಿಕೆಯಡಿಯಲ್ಲಿ ಪ್ರೇರಣೆ ಮತ್ತು ಆತ್ಮಸ್ಥೈರ್ಯ ನಿರ್ಮಾಣ ಎಂಬ ವಿಷಯದ ಮೇಲೆ ಡಾ. ಗುರುರಾಜ ಕರ್ಜಗಿಯವರ ಜೊತೆ ಸಂವಾದ ಕಾರ್ಯಕ್ರಮವನ್ನುಆಯೋಜಿಸಲಾಗಿತ್ತು. ಹಾಗೂ ಈ ಸಂವಾದದಿಂದ ವಿದ್ಯಾರ್ಥಿಗಳ ಮನೋಬಲ ವೃದ್ಧಿಯಾಗಲಿದೆಎಂದು ವಿ.ವಿಯ ಕುಲಪತಿ ಪ್ರೊ. ವಿಷ್ಣುಕಾಂತ ಎಸ್. ಚಟಪಲ್ಲಿ ಹೇಳಿದರು.

ಕೋವಿಡ19 ಸನ್ನಿವೇಶದಲ್ಲಿ ವಿದ್ಯಾರ್ಥಿಗಳಿಗೆ ಪ್ರೇರಣೆ ಹಾಗೂ ಆತ್ಮವಿಶ್ವಾಸ ಮೂಡಿಸಲು ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ, ಗದಗ ಡಾ. ಗುರುರಾಜ ಕರ್ಜಗಿಯವರ ಜೊತೆ ಏರ್ಪಡಿಸಿದ ಆನಲೈನ್ ಸಂವಾದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಡಾ. ಗುರುರಾಜ ಕರ್ಜಗಿಯವರು ಮಾತನಾಡುತ್ತ, ಕೊರೋನಾ ಸಂಧರ್ಭವನ್ನು ನಕಾರಾತ್ಮಕವಾಗಿ ನೋಡದೆ, ಆದರಿಂದ ಆದ ಒಳ್ಳೇಯ ಅಂಶಗಳ ಕಡೆಗೆ ಗಮನಹರಿಸಬೇಕು. ಕೊರೋನಾ ಸಂದರ್ಭದಲ್ಲಿನ ಬಿಡುವಿನ ಸಮಯವನ್ನು ವಿದ್ಯಾರ್ಥಿಗಳು ದೈಹಿಕ, ಮಾನಸಿಕ, ನೈತಿಕ ಮತ್ತು ಆಧ್ಯಾತ್ಮಿಕ ಬೆಳವಣಿಗೆಯ ಕಡೆಗೆ ಗಮನಹರಿಸಬೇಕು.



ವಿದ್ಯಾರ್ಥಿಗಳು ಒಳ್ಳೆಯ ವಿಚಾರ ಮಾಡುವುದರಿಂದ ಹಾಗೂ ಒಳ್ಳೆಯ ಚಿಂತನೆಗಳನ್ನು ಬೆಳಸಿಕೊಳ್ಳುವದರಿಂದ ಮತ್ತು ಮನಸ್ಸಿನ ಒಳಗಿನ ಕೊಳೆಯನ್ನು ಹೊರಹಾವುದರಿಂದ ಆತ್ಮವಿಶ್ವಾಸ ಚಿಗುರೊಡೆಯುತ್ತದೆ ಎಂದರು.

241 ವಿದ್ಯಾರ್ಥಿಗಳು ಹಾಗೂ ಅಧ್ಯಾಪಕರುಗಳು ಆನಲೈನ ಮೂಲಕ ಸಂವಾದದಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರು. ಡಾ.ಬಿ.ಎಲ್. ಲಕ್ಕಣ್ಣವರ, ಕುಲಸಚಿವರು ಸ್ವಾಗತಿಸಿದರು, ಡಾ. ಅಭಯಕುಮಾರ ಗಸ್ತಿ ನಿರೂಪಿಸಿದರು ಮತ್ತುಡಾ. ಗೀತಾ ಎನ್. ಬಂಗಾರಿ ವಂದನಾರ್ಪಣೆ ಮಾಡಿದರು